**2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಅಸಲು ದಾವಾ ನಂ.  71/24**

**ಪಿಡಬ್ಲ್ಯೂ :1**

ಸಾಕ್ಷಿಯನ್ನು ದಿನಾಂಕಃ  11-08-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಡಿ ಆರ್ ಜೆ ವಕೀಲರಿಂದಃ**

ದಾವಾ ಆಸ್ತಿಯು ನನ್ನ ಮಾವ ಶಿವಪ್ಪ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ. ನಿಪಿ 4 ಕ್ರಯಪತ್ರದಲ್ಲಿ ದಾವಾ ಆಸ್ತಿಯ ಚೆಕ್ಕುಬಂಧಿ ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.  ನಿಪಿ 4 ಕ್ರಯಪತ್ರದಂತೆ ಹಾಗೂ ಪಹಣಿಯಂತೆ ನಾನು ದಾವಾ ಆಸ್ತಿಗೆ ಚೆಕ್ಕುಬಂಧಿಯನ್ನು ನಮೂದಿಸಿರುತ್ತೇನೆ. ನಿಪಿ 4 ರ ಕ್ರಯಪತ್ರದಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 13 ಗಜ, ಉತ್ತರ ದಕ್ಷಿಣ 40 ಗಜ ಒಟ್ಟು ಸುಮಾರು 4 ¼ ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ . ನಾನು 7ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ 4 ರಲ್ಲಿ ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ಎಸ್ ಆರ್ ನಂಃ 1703 ದಿಃ 09-03-1951 ರಲ್ಲಿ ಇರುವ ಕ್ರಯಪತ್ರದಲ್ಲಿನ ಚೆಕ್ಕುಬಂಧಿಗೆ ಒಳಪಟ್ಟ ಜಾಗ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 4 ಮತ್ತು  5 ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ನಾನೇ ಹಾಜರುಮಾಡಿರುತ್ತೇನೆ. ನಿಪಿ 5 ರ  ಕ್ರಯಪತ್ರದಲ್ಲಿರುವ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಿಪಿ 5 ಕ್ರಯಪತ್ರದಲ್ಲಿ ಚೆಕ್ಕುಬಂಧಿಯು ಪೂರ್ವಕ್ಕೆ ಇದೇ ನಂಬರ್ ಪೈಕಿ ಜೋಳದಾಳ್ ವೀರಪ್ಪನಿಗೆ ನಾನು ಈ ದಿವಸ ಕ್ರಯಕ್ಕೆ ಕೊಟ್ಟ ಕಣ, ಪಶ್ಚಿಮಕ್ಕೆ ಇದೇ ನಂಬರ್ ಪೈಕಿ ಗೆ ನಾನು ಈ ದಿವಸ ಬೋರಪ್ಪ ಮತ್ತು ಕೃಷ್ಣಪ್ಪನಿಗೆ ಕ್ರಯಕ್ಕೆ ಕೊಟ್ಟ ಕಣ, ಉತ್ತರಕ್ಕೆ  ಇದೇ ನಂಬರ್ ಪೈಕಿ ಗೆ ನಾನು ಉಳಿಸಿಕೊಂಡ ಜಮೀನು ಮತ್ತು ದಕ್ಷಿಣಕ್ಕೆ ದಾರಿ ಇದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 4 ಮತ್ತು 5 ಕ್ರಯಪತ್ರಗಳ ಆಧಾರದ ಮೇಲೆ ನಾನು ದಾವಾ ಆಸ್ತಿ ಇದೆ ಎಂದು ಹೇಳುತ್ತಿದ್ದೇನೆ. ದಾವಾ ಆಸ್ತಿಯಲ್ಲಿ ನಾನು ನಮೂದಿಸಿರುವ ಚೆಕ್ಕುಬಂಧಿ ಮತ್ತು ನಿಪಿ 5 ಕ್ರಯಪತ್ರದಲ್ಲಿರುವ ಚೆಕ್ಕುಬಂಧಿಗಳ ನಡುವೆ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರದ

ಪ್ರಕಾರ ನಾನು ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತೇನೆ. ಯಾವಾಗ ಅಳತೆ ಮಾಡಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಅಂದಾಜು 08-09 ವರ್ಷ ಆಗಿರಬಹುದು. ಸದರಿ ಅಳತೆ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಪೂರ್ವ ಪಶ್ಚಿಮ 25 ಅಡಿ ಉತ್ತರ ದಕ್ಷಿಣ 19 ½ ಅಡಿ ವಿಸ್ತೀರ್ಣದಲ್ಲಿ ವಾಸಕ್ಕಾಗಿ ಕೆಂಪು ಹಂಚಿನ ಮನೆ ಯನ್ನು ಕಟ್ಟಿರುತ್ತೇವೆ ಎಂದು ಹೇಳಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಾವಾ ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಗೆ ಬರುವುದಿಲ್ಲ, ಸರ್ವೆ ನಂಬರ್ ಜಮೀನಿನಲ್ಲಿರುತ್ತದೆ. ದಾವಾ ಆಸ್ತಿಯಲ್ಲಿ ಮನೆ ನಿರ್ಮಾಣ ಮಾಡಲು ಗ್ರಾಮ ಪಂಚಾಯಿತಿಯಿಂದ ಅನುದಾನವನ್ನು ಪಡೆದುಕೊಂಡಿದ್ದೀರಾ ಎಂದರೆ ಪ್ರತಿವಾದಿಯೇ ಅನುದಾನ ಕೊಡಿಸಿರುತ್ತಾರೆ. ಗ್ರಾಮ ಪಂಚಾಯಿತಿಯಿಂದ ಮನೆ ಕಟ್ಟಲು ಅನುದಾನ ನೀಡಬೇಕಾದರೆ ಜಾಗವು ಗ್ರಾಮ ಠಾಣಾ ವ್ಯಾಪ್ತಿಗೆ ಇರಬೇಕು ಎಂದರೆ ಸರಿ . ಆಸ್ತಿಯು ಗ್ರಾಮ ಠಾಣ ವ್ಯಾಪ್ತಿಗೆ ಒಳಪಟ್ಟರೇ ಖಾತೆಗೆ ಸಂಬಂಧಪಟ್ಟ ನಂಬರನ್ನು ಪಂಚಾಯಿತಿಯವರು ನೀಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಯು ಈ ಹಿಂದೆ ನನ್ನ ಮತ್ತು ನನ್ನ ಮಾವ ಮತ್ತು ಮಕ್ಕಳ ವಿರುದ್ಧ ಅಸಲು ದಾವಾ ಸಂಃ 134/2020 ರಂತೆ ದಾವೆಯನ್ನು ಘೋಷಣಾತ್ಮಕ ಡಿಕ್ರಿ ಮತ್ತು ಸ್ವಾಧೀನತೆಗಾಗಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ನ್ಯಾಯಾಲಯವು ಈ ಪ್ರಕರಣದ ಪ್ರತಿವಾದಿಗೆ ದಾವಾ ಆಸ್ತಿಯ ಜಾಗವನ್ನು ಬಿಟ್ಟುಕೊಡಬೇಕು ಎಂದು ಆದೇಶ ಮಾಡಿರುತ್ತದೆ ಎಂದರೆ ಸರಿ . ಸಾಕ್ಷಿಯು ಅಸಲು ದಾವಾ ಸಂಃ 134/20 ರ ಪ್ರಕರಣದ ತೀರ್ಪು ಮತ್ತು ಡಿಕ್ರಿಯನ್ನು ಒಪ್ಪಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಃ 134/2020 ರ ಪ್ರಕರಣವನ್ನು ಪ್ರತಿವಾದಿಯು ನಮ್ಮ ವಿರುದ್ಧ ದಾಖಲು ಮಾಡಿದ ನಂತರ ನಾನು ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ . ಈ ದಾವೆಯಲ್ಲಿ ಪ್ರತಿವಾದಿಯು ನಮ್ಮ ವಿರುದ್ಧ ಅಸಲು ದಾವಾ ಸಂಃ 134/2020 ರಂತೆ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣವು ಚಾಲ್ತಿಯಿದ್ದ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು ದಾಖಲು ಮಾಡಲು ವಾದ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪ್ರತಿವಾದಿಯ ಆಸ್ತಿಯನ್ನು ನಾನು ನೋಡಿರುತ್ತೇನೆ. ಪ್ರತಿವಾದಿಯ ತಂದೆ ಸರ್ವೆ ನಂಃ 89/2ಸಿ ರಲ್ಲಿ 5 ಗುಂಟೆ ಆಸ್ತಿಯನ್ನು 24-04-1972 ರಲ್ಲಿ ಅವರ ಹಿಂದಿನ ಮಾಲೀಕರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಖರೀದಿ ಮಾಡಿದ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ಪ್ರತಿವಾದಿಯ ತಂದೆ ಬಸಪ್ಪನವರ ಜಮೀನು, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಗಣೇಶಾಚಾರ್ ರವರ ಕಣ ಮತ್ತು ದಕ್ಷಿಣಕ್ಕೆ ಶಿವರುದ್ರಪ್ಪಚಾರ್ ರವರ ಕಣ ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರತಿವಾದಿಯ ತಂದೆ ಸದರಿ ಆಸ್ತಿಯ ಉತ್ತರ ದಿಕ್ಕಿನ ಗಣೇಶಾಚಾರ್ ರವರ ಸರ್ವೆ ನಂಃ 89/2ಬಿಯಲ್ಲಿ ನ 5 ಗುಂಟೆ ಜಮೀನನ್ನು 28-04-1972 ರಲ್ಲಿ ಪೂರ್ವಕ್ಕೆ , ಉತ್ತರ ಮತ್ತು ದಕ್ಷಿಣಕ್ಕೆ ಪ್ರತಿವಾದಿಯ ತಂದೆಯಾದ ಬಿ ಜಿ ಬಸಪ್ಪನವರ ಜಮೀನು, ಪಶ್ಚಿಮಕ್ಕೆ ರಸ್ತೆ ಇರುವ ವಿಸ್ತೀರ್ಣದ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲೆ ಹೇಳಿದ ಎರಡೂ ಚೆಕ್ಕುಬಂಧಿಗಳ ಮಧ್ಯದಲ್ಲಿಯೇ ನಮ್ಮ ಆಸ್ತಿ ಇದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ .

ದಾವಾ ಆಸ್ತಿಯಲ್ಲಿ ನಾನು ಸ್ವಾಧೀನಾನುಭವದಲ್ಲಿ ಇದ್ದೇನೆ ಎಂದು ಹೇಳಲು ನಿಪಿ 4 ಮತ್ತು 5 ರ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿ ರಾಜಪ್ಪನವರು ಏನೆಂದು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತಾರೆ ಎಂದರೆ ಅವರು ಅವರ ಜಾಗಕ್ಕೆ ತಕರಾರು ಹಾಕಿ ನಾನು ನಮ್ಮ ಜಾಗಕ್ಕೆ ತಕರಾರು ಹಾಕಿರುತ್ತೇನೆ. ಅಸಲು ದಾವಾ ಸಂಃ 134/20 ರ ಪ್ರಕರಣದ ಆದೇಶದಂತೆ ಪ್ರತಿವಾದಿಗೆ ಆಸ್ತಿಯನ್ನು ಬಿಟ್ಟುಕೊಟ್ಟಿದ್ದೀರಾ ಎಂದರೆ ನಮ್ಮ ಆಸ್ತಿ ತೋರಿಸುವವರೆಗೂ ನಾವು ಬಿಟ್ಟುಕೊಡುವುದಿಲ್ಲ. ದಾವಾ ಆಸ್ತಿ ಎಲ್ಲಿದೆ ಎಂದು ಹುಡುಕಲು ನಮಗೆ ತೊಂದರೆ ಇರುತ್ತದೆ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನ ಇಲ್ಲದೇ ಇದ್ದರೂ ಪ್ರತಿವಾದಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ತಾತ್ಕಾಲಿಕ ನಿರ್ಬಂಧಕ್ಕಾಜ್ಞೆ ತಿರಸ್ಕೃತ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ನನಗೆ ನೆನಪಿಲ್ಲ. ಪ್ರತಿವಾದಿಯೇ ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ಅನುದಾನ ಕೊಡಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 134/20 ರ ಪ್ರಕರಣದ ಆದೇಶದಂತೆ ಜಾಗ ಬಿಟ್ಟು ಕೊಡಲು ತೊಂದರೆ ಇಲ್ಲ ಎಂದರೆ ನಮ್ಮ ಜಾಗ ಸಿಗುವವರೆಗೂ ನಾವು ಬಿಟ್ಟುಕೊಡುವುದಿಲ್ಲ. ದಾವಾ ಆಸ್ತಿಯಲ್ಲಿ ನಾವು

ಸ್ವಾಧೀನಾನುಭದಲ್ಲಿ ಇಲ್ಲದೇ ಇದ್ದರೂ ಪ್ರತಿವಾದಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸುಳ್ಳು ವ್ಯಾಜ್ಯ ಕಾರಣ ತೋರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.